# ಅಧ್ಯಾತ್ಮಪ್ರಕಾಶಕಾರ್ಯಾಲಯ ಸ್ಥಾಪನಾ
# ಶತಮಾನೋತ್ಸವ
**(1920–2020)**

**"ವೇದಾಂತವಿಜ್ಞಾನದ ಸುನಿಶ್ಚಿತವಾದ ತತ್ತ್ವವನ್ನು ತಮ್ಮ ಜೀವನದಲ್ಲಿ ಕಂಡುಕೊಂಡ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು"** ತಮ್ಮ ಪೂರ್ವಾಶ್ರಮದಲ್ಲಿ (ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮಾ –ವೈ. ಸುಬ್ಬರಾಯರು) 1920ರಲ್ಲಿ **"ಅಧ್ಯಾತ್ಮಪ್ರಕಾಶಕಾರ್ಯಾಲಯ"**ವನ್ನು ಸ್ಥಾಪಿಸಿದರು. **"ಅಧ್ಯಾತ್ಮವಿದ್ಯೆಯಲ್ಲಿ ಜನರಿಗೆ ಹೆಚ್ಚಿನ ಆದರವನ್ನು ಉಂಟುಮಾಡುವುದೇ ಅಧ್ಯಾತ್ಮಪ್ರಕಾಶಕಾರ್ಯಾಲಯದ ಮುಖ್ಯ ಉದ್ದೇಶ."**

**ಈ ಧ್ಯೇಯಸಾಧನೆಗೆ ಅಂಗವಾಗಿ ಮತ್ತೆ ಕೆಲವು ಉದ್ದೇಶಗಳು**

1. ಅಧ್ಯಾತ್ಮವಿಚಾರದಲ್ಲಿ ಜನಸಾಮಾನ್ಯರವರೆಗೂ ಎಲ್ಲರಿಗೂ ಸವಿಯುಂಟಾಗುವಂತೆ ಪ್ರಯತ್ನಿಸುವುದು.
2. ಮೂಢವಿಶ್ವಾಸಗಳನ್ನು ಕಿತ್ತುಹಾಕಿ ಆತ್ಮವಿಚಾರಕ್ಕೆ ಅನುಕೂಲವಾಗಿ ಒದಗುವಂಥ ಸಾಧನಗಳನ್ನು ಮಾಡಬೇಕೆನ್ನುವವರಿಗೆ ಸಹಾಯಮಾದುವುದು.
3. ಅಧ್ಯಾತ್ಮವಿಚಾರದಲ್ಲಿ ಮನಸ್ಸಿಟ್ಟುಕೊಂಡಿರುವದು, ಅಂಥವರಲ್ಲಿ ಒಬ್ಬರಿಗೊಬ್ಬರ ಪರಿಚಯ ಮಾಡಿಕೊಡುವದು.
4. ಅಧ್ಯಾತ್ಮಗ್ರಂಥಾವಲೊಕನ, ಪುರಾಣಶ್ರವಣ, ಅರ್ಚನ, ಜಪ – ಮುಂತಾದ ಅನುಷ್ಠಾನಗಳನ್ನು ಮಾಡುವದು, ಮಾಡುವವರಿಗೆ ಅವಕಾಶಾಕಲ್ಪಿಸುವದು, ಒಬ್ಬರಿಗೆ ತಿಳಿದಿರುವ ವಿಷಯಗಳನ್ನು ಅನುಭವಕ್ಕೆ ಗೋಚರವಾದ ವಿಷಯಗಳನ್ನು ಮತ್ತೊಬ್ಬರಿಗೆ ತಿಳಿಯಪಡಿಸುವದು, ಮತ್ತೊಬ್ಬರ ಅನುಭವದ ವಿಷಯವಾಗಿ ಕೇಳಿ ಲಾಭಪಡೆಯುವದು.

–ಇಂಥ ಕಾರ್ಯಗಳಲ್ಲಿ **ಸದಾನಿರತವಾಗಿ ಆಬಾಲವೃದ್ಧರಿಗೂ ಅಧ್ಯಾತ್ಮವಿಷಯದಲ್ಲಿ ಆದರವನ್ನು ಉಂಟುಮಾಡುತ್ತಾ** ಸಂಸ್ಥೆಯು ಶ್ರೀಗಳವರು ಹಾಕಿಕೊಟ್ಟಿರುವ ಮಾರ್ಗದರ್ಶನದಲ್ಲಿಯೇ ಮುಂದುವರಿಯುತ್ತಿದೆ. ಅಧ್ಯಾತ್ಮಪ್ರಸಾರವೇ ಮುಖ್ಯ ಗುರಿಯಾಗಿ ಹೊಂದಿರುವ ಕಾರ್ಯಾಲಯವು ಗುರಿಯನ್ನು ಸಾಧಿಸಲು ಕೈಗೊಂಡ ಚಟುವಟಿಕೆಗಳಲ್ಲಿ ಪ್ರಧಾನವಾಗಿ

1. **ಗ್ರಂಥಪ್ರಕಟಣೆ:–** ಇದುವರೆಗೆ ಶ್ರೀಶ್ರೀಗಳವರ ಹಾಗೂ ಅವರ ಶಿಷ್ಯಪರಂಪರೆಯವರು ಬರೆದ ಸುಮಾರು **250ಕ್ಕೂ ಮೀರಿ ಸಂಸ್ಕೃತ, ಕನ್ನಡ, ಆಂಗ್ಲಭಾಷೆಗಲ್ಲಿ** ಗ್ರಂಥಗಳನ್ನು ಪ್ರಕಟಿಸಿದೆ. ಅವುಗಳಲ್ಲಿ **ಶ್ರೀಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯಗಳು, ಪ್ರಕರಣಗ್ರಂಥಗಳು, ವಿವೇಕಾನಂದರಕೃತಿಗಳು, ಶ್ರೀರಾಮಾನುಜಾಚಾರ್ಯರ ಗ್ರಂಥಗಳು, ಶ್ರೀಶ್ರೀಗಳವರ ಸ್ವತಂತ್ರಗ್ರಂಥಗಳು, ಸ್ತೋತ್ರಸಾಹಿತ್ಯ** ಮೊದಲಾದವುಗಳು ಸೇರಿವೆ.
2. **ಪತ್ರಿಕಾಪ್ರಕಟಣೆ:– "ಅಧ್ಯಾತ್ಮಪ್ರಕಾಶ"** ಮಾಸಪತ್ರಿಕೆಯು 1923ರಲ್ಲಿ ಪ್ರಾರಂಭವಾಗಿ ಈಗ 88ನೇ ಸಂಪುಟವು ಪ್ರಕಟವಾಗುತ್ತಿದೆ. 2500 ಚಂದಾದಾರರನ್ನು ಹೊಂದಿದೆ. ಬೆಂಗಳುರು ಶಾಖೆಯಿಂದ ಪ್ರಕಟವಾಗುವ **"ಶಂಕರಭಾಸ್ಕರ"** ತ್ರೈಮಾಸಿಕ ಪತ್ರಿಕೆಯು 32 ಸಂಪುಟಗಳನ್ನು ಪೂರೈಸಿದ್ದು 4700 ಚಂದಾದಾರರನ್ನು ಹೊಂದಿದೆ.
3. **ಪ್ರವಚನ:–** ಬೇರೆ ಬೇರೆ ಕಡೆಗಳಲ್ಲಿ **ಶಂಕರವೇದಾಂತದ ತತ್ತ್ವಪ್ರಸಾರ**ಮಾಡಲು ಸಪ್ತಾಹ, ಶಿಬಿರಗಳನ್ನು ನಡೆಸುವದು.
4. **ಅಧ್ಯಾತ್ಮವಿದ್ಯಾನಿಲಯ:– ಶಂಕರವೇದಾಂತದ ತತ್ತ್ವಪ್ರಸಾರ**ಮಾಡಲು ಪ್ರಚಾರಕರನ್ನು ಸಿದ್ಧಪಡಿಸುವುದು.
5. **ಅನುಷ್ಠಾನಾದಿಗಳು:–** ಕಾರ್ಯಾಲಯದಲ್ಲಿ ಶ್ರೀರಾಮನವಮಿ, ಶಂಕರಜಯಂತಿ, ಶ್ರೀಶ್ರೀಗಳವರ ಆರಾಧನೆ, ಶರನ್ನವರಾತ್ರಿ, ಗೀತಾಜಯಂತಿ, ವೇದಾಂತಸಪ್ತಾಹ, ವೇದಾಂತಶಿಬಿರ ಇವುಗಳನ್ನು ನಡೆಸುವುದು.

ಇಷ್ಟು ಪ್ರಧಾನ ಅಂಶಗಳನ್ನು ಪೂರಕವಾಗಿ ಇಟ್ಟುಕೊಂಡು ಶ್ರೀಗಳವರು ಹಾಕಿಕೊಟ್ಟ ಮಾರ್ಗದರ್ಶನದಂತೆ ನಡೆಸುತ್ತಾ ಬಂದಿದೆ. ಇಷ್ಟೂ ಕಾರ್ಯಗಳೂ ಮಹಾಜನರಿಂದ ಬಂದ ಸಹಕಾರದಿಂದಲೇ ನೇರವೇರಿರುವದು. ಅವರು ನೀಡುವ ನೆರವನ್ನೇ ಮಿತವಾಗಿ ಉಪಯೋಗಿಸಿಕೊಂಡು ತನ್ನ ಧ್ಯೇಯವನ್ನು ಸಾಧಿಸುತ್ತಿದೆ. ಈ ಎಲ್ಲ ಕಾರ್ಯಗಳನ್ನೂ ಯಶಸ್ವಿಯಾಗಿ ಸಾಧಿಸುತ್ತಾ ಕಾರ್ಯಾಲಯವು ಸ್ಥಾಪನೆಯಾಗಿ 2020ಕ್ಕೆ ನೂರು ವರ್ಷಗಳು ಪೂರೈಸುವದೆಂಬುದು ಅತ್ಯಂತ ಸಂತೋಷದ ವಿಷಯ.

**ಕಾರ್ಯಾಲಯ ಸ್ಥಾಪನಾ ಶತಮಾನೋತ್ಸವವನ್ನು** 22 ಡಿಸೆಂಬರ್ 2019 ಭಾನುವರದಂದು ಉದ್ಘಾಟನೆ ಮಾಡಿ, ಡಿಸೆಂಬರ್ 2020ರ ವರೆಗೆ **ಶತಮಾನೋತ್ಸವ** ವರ್ಷವನ್ನು ಆಚರಿಸಿ, 2020ರ ಶ್ರೀಶ್ರೀಗಳವರ ಜಯಂತಿಯಂದು ಮಂಗಳಗೊಳಿಸಬೇಕೆಂದು ಸಂಕಲ್ಪಿಸಲಾಗಿದೆ. ಅದಕ್ಕೆ ಒಂದು ವರ್ಷಗಳ ಕಾಲ ಈ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**ಶತಮಾನೋತ್ಸವದ ಅಂಗವಾಗಿ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳು**

1. **ಸಪ್ತಾಹಗಳು** – ರಾಜ್ಯದ ಬೇರೆಬೇರೆ ಸ್ಥಳಗಳಲ್ಲಿ ನೂರು ಸಪ್ತಾಹಗಳನ್ನು ಏರ್ಪಡಿಸುವದು. ರಾಜ್ಯದ ಬೆರೆಬೆರೆ ಸ್ಥಳಗಳಲ್ಲಿ ವೇದಾಂತ ಉಪನ್ಯಾಸಗಳನ್ನು ಆಯೋಜಿಸಿ ಸಪ್ತಾಹದಲ್ಲಿ **ಶುದ್ಧಶಾಂಕರಪ್ರಕ್ರಿಯೆಯ ಪ್ರಸಾರ, ಆ ಮೂಲಕ ಶ್ರೀಶ್ರೀಗಳವರ ಚಿಂತನಾಕ್ರಮ ಮತ್ತು ಕಾರ್ಯಾಲಯದ ಮಹತ್ಕಾರ್ಯಗಳ ಪ್ರಚಾರಮಾಡುವವುದು**.

   ಈ ಕಾರ್ಯಕ್ಕೆ ಪತ್ರಿಕೆಯ ಚಂದಾದಾರರು, ಕಾರ್ಯಾಲಯದ ಅಭಿಮಾನಿಗಳು ತಮ್ಮ ಊರಿನ ದೇವಸ್ಥಾನ, ಧಾರ್ಮಿಕಸಂಸ್ಥೆ ಅಥವಾ ಮನೆಗಳಲ್ಲಿ ಸಪ್ತಾಹವನ್ನು ಆಯೋಜಿಸಬಹುದು. ಕಾರ್ಯಾಲಯದಿಂದ ವಿದ್ವಾಂಸರನ್ನು ಕಳುಹಿಸಲಾಗುವದು, ಅಥವಾ ಅಲ್ಲಿಯೇ ಯಾರಾದರೂ ಶ್ರೀಶ್ರೀಗಳವರ ಬೋಧನಾಕ್ರಮವನ್ನು ಅಭ್ಯಾಸಮಾಡಿದವರು ಇದ್ದರೆ ಅವರಿಂದಲೇ ಉಪನ್ಯಾಸಗಳನ್ನು ಮಾಡಿಸಬಹುದು.

2. **ವೇದಾಂತ ಸಂವಾದಗೋಷ್ಠಿ** – ಅಧ್ಯಾತ್ಮಪ್ರಕಾಶಕಾರ್ಯಾಲಯ ಹೊಳೆನರಸೀಪುರ ಮತ್ತು ಅಧ್ಯಾತ್ಮಪ್ರಕಾಶಕಾರ್ಯಾಲಯ ಬೆಂಗಳೂರು ಶಾಖೆಯಲ್ಲಿ ವಿದ್ವಾಂಸರು ಮತ್ತು ಜಿಜ್ಞಾಸುಗಳ ನಡುವೆ ವೇದಾಂತ ಸಂವಾದ ಕಾರ್ಯಕ್ರಮವು ನಡೆಯುವದು.
3. **ಸ್ಮರಣಸಂಚಿಕೆ** – ಕಾರ್ಯಾಲಯದ ನೂರುವರ್ಷಗಳ ಇತಿಹಾಸ–ಸಾಧನೆಗಳ ಅನಾವರಣ ಮತ್ತು ವಿದ್ವಾಂಸರುಗಳ–ಜಿಜ್ಞಾಸುಗಳ ಲೇಖನಗಳಿಂದ ಕೂಡಿದ ಸ್ಮರಣಸಂಚಿಕೆಯನ್ನು ಪ್ರಕಟಿಸಲಾಗುವದು.
4. **ಸಾಕ್ಷ್ಯಚಿತ್ರ** – ಶ್ರೀಶ್ರೀಗಳವರ ಜೀವನ ಮತ್ತು ಕಾರ್ಯಾಲಯದ ಇತಿಹಾಸವನ್ನು ತಿಳಿಸುವ ಸಾಕ್ಷ್ಯಚಿತ್ರಗಳ ದೃಶ್ಯೀಕರಣ (video) ಮಾಡಲಾಗುವುದು.

ಈ ಮಹತ್ಕಾರ್ಯವನ್ನು ನೆರವೇರಿಸಲು ಈ ಯೋಜನೆಯನ್ನು ರೂಪಿಸಲಾಗಿದೆ:

1. ಸಪ್ತಾಹದ ಕಾಣಿಕೆ: ಒಂದು ಸಪ್ತಾಹವನ್ನು ನಡೆಸಲು ಧನಸಹಾಯ.
2. ವೇದಾಂತ ಸಂವಾದಗೋಷ್ಠಿ ಕಾಣಿಕೆ: ಸಂವಾದಗೋಷ್ಠಿಯ ಖರ್ಚಿಗೆ ಹಣ ಕೊಡಬಹುದು.
3. ಸ್ಮರಣಸಂಚಿಕೆ: ಸ್ಮರಣಸಂಚಿಕೆಯಲ್ಲಿ ತಮ್ಮ ಸಂಸ್ಥೆ ಮುಂತಾದವುಗಳ ಜಾಹೀರಾತನ್ನು ನೀಡಬಹುದು.

**ವಿವರ**

**ಸಪ್ತಾಹ:** 10,000/–

**ಜಾಹೀರಾತು: ಒಂದು ಪುಟ–** 10000/–

**ಅರ್ಧಪುಟ** – 5000/–

**ಸಂವಾದಗೋಷ್ಠಿ:** 5000/–

**ನಿರ್ವಹಣೆಗೆ:** 5000/–

ಉದಾರಮನಸ್ಸುಳ್ಳ ದಾನಿಗಳು ಮೇಲೆತಿಳಿಸಿರುವ ಯಾವುದಾದರೂ ಒಂದರಲ್ಲಿ ಭಾಗವಹಿಸಿ ಈ ಮಹತ್ಕಾರ್ಯವು ಯಶಸ್ವಿಯಾಗಲು ಸಹಕರಿಸಬೇಕಾಗಿ ಪ್ರಾರ್ಥನೆ. ತಮ್ಮ ಎಲ್ಲಾ ದಾನಗಳಿಗೂ

**80G ಆದಾಯತೆರಿಗೆ ವಿನಾಯತಿ ದೊರೆಯುತ್ತದೆ.**

ಚೆಕ್‌ನ್ನು **ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ–** ಹೆಸರಿಗೆ ಬರೆಯಬೇಕು.

**NEFT:** ಮೂಲಕ ಹಣವನ್ನು ವರ್ಗಾಯಿಸುವವರು

State Bank Of India, Holenarasipur; **IFSC – SBIN0008040**

**SB Ac/NO: 10693661944**

Karnataka Bank Ltd Holenarasipur; **IFSC – KARB0000309**

**SB Ac/NO: 3092500100000201**

Karnataka Bank Ltd Basavanagudi Bangalore ; **IFSC – KARB000090**

**SB Ac/NO: 0902500101666301**

ಹಣವನ್ನು ವರ್ಗಾಯಿಸಿದ ನಂತರ ದಯವಿಟ್ಟು ದೂರವಾಣಿ ಮೂಲಕ ವಿವರವನ್ನು ತಿಳಿಸಬೇಕಾಗಿ ವಿನಂತಿ.

**ಈ ಎಲ್ಲ ಕಾರ್ಯಗಳಲ್ಲಿ ಭಾಗಿಯಾಗಲು ಆಸಕ್ತರಾದ ಜಿಜ್ಞಾಸುಭಕ್ತರು**

**ಅಧ್ಯಾತ್ಮಪ್ರಕಾಶಕಾರ್ಯಾಲಯ**
**ಹೊಳೆನರಸೀಪುರ –573211**
**ದೂರವಾಣಿ: 08175–2573820**
**ಮೊ: 8073559498**

**ಅಧ್ಯಾತ್ಮಪ್ರಕಾಶಕಾರ್ಯಾಲಯ ಬೆಂಗಳೂರು**
**ನಂ. 68, (ಹೊಸ ನಂ 6), ಎ.ಪಿ.ಕೆ. ರಸ್ತೆ**
**2ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು–70**
**ದೂರವಾಣಿ: 080–26765548**
**ಲಕ್ಷ್ಮೀಶ ಭಟ್ಟ – 9740277987**

ಶ್ರೀ ರವಿ – **9448350001**

**ಸಂಪರ್ಕಿಸಬೇಕಾಗಿ ಪ್ರಾರ್ಥಿಸುತ್ತೇವೆ.**

**ಇಂತಿ**

**ವಿಶ್ವಸ್ತಸಮಿತಿ/ಕಾರ್ಯಕಾರಿಸಮಿತಿ**<br>
**ಅಪ್ರಕಾ ಹೊಳೆನರಸೀಪುರ ಮತ್ತು ಬೆಂಗಳೂರು**